**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**

**<u>ಕೊಡಗು, ಮಡಿಕೇರಿ.</u>**

**<u>ಸ್ಪೆಷಲ್ ಕೇಸ್ ನಂ. 54/2019</u>**

**ಪ್ರಾಸಾ : 2**

**ಚಾಸಾ : 2**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಎಸ್. ನಂದೀಶ** |
| **ತಂದೆಯ ಹೆಸರು** | : | **ಎಂ. ಶಿವ** |
| **ವಯಸ್ಸು** | : | **20 ವರ್ಷ** |
| **ವೃತ್ತಿ** | : | **ಪೈಂಟರ್** |
| **ವಾಸ** | : | **ಚೌಡ್ಲು ಗ್ರಾಮ, ಸೋಮವಾರಪೇಟೆ.** |

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 16.09.2021**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ</u>**

ಪ್ರಾಸಾ-1 ನನ್ನ ದೊಡ್ಡಪ್ಪನ ಮಗ. ಚಾಸಾ-3 ರಿಂದ 5 ಗೊತ್ತು. ಆರೋಪಿ ಗೊತ್ತು. ನಾನು ಬೋವಿ ಜನಾಂಗಕ್ಕೆ ಸೇರಿದ್ದು, ಅದು ಪರಿಶಿಷ್ಟ ಜಾತಿಗೆ ಸೇರುತ್ತದೆ.

ದಿನಾಂಕಃ20.10.2019 ರಂದು ನಾನು ಪ್ರಾಸಾ-1 ರವರು ಸೋಮವಾರಪೇಟೆಯಿಂದ ಚಿಕನ್ ತೆಗೆದುಕೊಂಡು ವಾಪಾಸ್ಸು ಊರಿಗೆ ಬರುವ ಸಲುವಾಗಿ ಕಕ್ಕೆ ಹೊಳೆ ಬಳಿ ಬಂದಾಗ ಅಲ್ಲಿ ಚಾಸಾ-3 ರವರು ತಮ್ಮ ಸ್ಕೂಟರನ್ನು ನಿಲ್ಲಿಸಿಕೊಂಡು ನಿಂತಿದ್ದರು. ಅವರನ್ನು ನೋಡಿ ಪ್ರಾಸಾ-1 ಮತ್ತು ನಾನು ಅಲ್ಲಿಗೆ ಹೋಗಿದ್ದು, ಪ್ರಾಸಾ-1 ರವರು ಅವರ ಜೊತೆ ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ಸಂಜೆ 6.00 ಗಂಟೆ ಸಮಯದಲ್ಲಿ ಆರೋಪಿ ತನ್ನ ಬಾಬ್ತು ಕಾರಿನಲ್ಲಿ ಕಕ್ಕೆ ಹೊಳೆ ಕಡೆಯಿಂದ ಬಂದು ನಮ್ಮನ್ನು ನೋಡಿ ಕಾರನ್ನು ನಿಲ್ಲಿಸಿ ಪ್ರಾಸಾ-1 ರವರನ್ನು ಉದ್ದೇಶಿಸಿ

ಏಕಾ ಏಕಿ  ವಡ್ಡ ಸೂಳೆ ಮಗನೆ ನಿನ್ನ ತಾಯಿ ಕೇಯ ನಿನ್ನನ್ನು ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಕಾರಿನಲ್ಲಿಯೇ ಸೋಮವಾರಪೇಟೆ ಕಡೆ ಹೋದರು. ನಂತರ ನಾನು ಮತ್ತು ಪ್ರಾಸಾ-1 ರವರು ಮನೆಗೆ ಬಂದೆವು.  ಅಲ್ಲಿ ಪ್ರಾಸಾ-1 ರವರು ನನಗೆ ಚಿಕನ್ನನ್ನು ಕೊಟ್ಟು, ಇದನ್ನು ದೊಡ್ಡಪ್ಪನಿಗೆ ಕೊಟ್ಟು ನಾಯಿಗೆ ಹಾಕುವಂತೆ ಹೇಳು ಎಂದು ಹೇಳಿ ಚಾಸಾ-5 ರವರ ಅಂಗಡಿಯ ಬಳಿ ಬೈಕಿನಲ್ಲಿ ಹೋದರು.  ಆ ನಂತರ ನಾನು ಸಹ ಮಾಮೂಲಿಯಂತೆ ನನ್ನ ಬೈಕಿನಲ್ಲಿ ಚಾಸಾ-5 ರವರ ಅಂಗಡಿಯ ಬಳಿ ಹೋದೆನು.  ನಾನು ಅಲ್ಲಿಗೆ ಹೋದಾಗ ಚಾಸಾ-4 ರವರು ಸಹ ಅಲ್ಲಿ ಇದ್ದರು.  ನಾನು ಅಲ್ಲಿಗೆ ಹೋದಾಗ ಪ್ರಾಸಾ-1 ರವರು ಆರೋಪಿಗೆ ಫೋನ್ ಮಾಡಿ ನೀವು ದಾರಿಯಲ್ಲಿ ಬೈದಿರುತ್ತೀರಿ ಆ ಬಗ್ಗೆ ಮಾತನಾಡಬೇಕಾಗಿದೆ ಚಾಸಾ-5 ರವರ ಅಂಗಡಿಯ ಬಳಿ ಬನ್ನಿ ಎಂದು ತಿಳಿಸಿದರು.  ನಂತರ ಆರೋಪಿ ತನ್ನ ಕಾರಿನಲ್ಲಿ ಅಲ್ಲಿಗೆ ಬಂದರು. ಆಗ ಪ್ರಾಸಾ-1 ರವರು ದಾರಿಯಲ್ಲಿ ಯಾರಿಗೆ ಬೈದಿದ್ದೀರಿ ಎಂದು ಕೇಳಿದಾಗ, ಆರೋಪಿ ನಿನಗೆ ಬೈದಿದ್ದೀನಿ ವಡ್ಡ ಸೂಳೆಮಗನೆ ಎಂದು ಹೇಳಿದರು.  ನಂತರ ಅವರಿಬ್ಬರ ಮಧ್ಯೆ ಮಾತುಕತೆ ನಡೆಯುತ್ತಿದ್ದು, ಆರೋಪಿ ನನ್ನ ಬಗ್ಗೆ ಇಂಜಿನಿಯರ್ ವಿಜಯ ಕುಮಾರ್ ಬಳಿ ಏನು ಹೇಳಿದ್ದೀಯಾ ಎಂದು ಪ್ರಾಸಾ-1 ರವರ ಬಳಿ ಕೇಳಿದರು.  ಆಗ ಪ್ರಾಸಾ-1 ರವರು ವಿಜಯ ಕುಮಾರ್ ರವರ ಬಳಿ ನಿಮ್ಮ ಬಗ್ಗೆ ಏನು ಹೇಳಿಲ್ಲ ಎಂದು ತನ್ನ ಮೊಬೈಲ್ ನಿಂದ ವಿಜಯ ಕುಮಾರ್ ರವರಿಗೆ ಕರೆ ಮಾಡಿ ಸ್ಪೀಕರ್ ಹಾಕಿ ಆರೋಪಿಗೆ ಕೇಳಿಸಿದರು.  ನಂತರ ಆರೋಪಿ ವಡ್ಡ ಸೂಳೆ ಮಗನೆ ನಿನ್ನನ್ನು ಬಿಡುವುದಿಲ್ಲ, ತೆಗೆಯುತ್ತೇನೆ ಎಂದು ಹೇಳಿ ತನ್ನ ಕಾರಿನಲ್ಲಿದ್ದ ಕೋವಿಯನ್ನು ತೆಗೆದುಕೊಂಡು ಬಂದು ಪ್ರಾಸಾ-1 ರವರ ಎದೆಯ ಎಡಭಾಗಕ್ಕೆ ಗುಂಡು ಹಾರಿಸಿರುತ್ತಾರೆ.  ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ್ದನ್ನು ನಾನು ಬೀದಿ ದೀಪದಿಂದ ನೋಡಿರುತ್ತೇನೆ.  ಆ ರೀತಿ ಗುಂಡು ಹಾರಿಸಿದ್ದರಿಂದ ಪ್ರಾಸಾ-1 ರವರ ಎದೆಯ ಎಡಭಾಗಕ್ಕೆ ಗುಂಡೇಟು ತಗುಲಿ ರಕ್ತಗಾಯ ಆಗಿರುತ್ತದೆ.  ನಂತರ ಆರೋಪಿ ಕೋವಿಯನ್ನು ತೆಗೆದುಕೊಂಡು ಅಲ್ಲಿಂದ ಕಾರಿನಲ್ಲಿ ಹೊರಟು ಹೋದರು.

ನಂತರ ನಾನು ಮತ್ತು ಚಾಸಾ-3 ರವರು ಪ್ರಾಸಾ-1 ರವರನ್ನು ರಸ್ತೆಯ ಬಳಿ ಕರೆದುಕೊಂಡು ಬಂದಿದ್ದು, ಅಲ್ಲಿ ಯಾವುದೋ ಆಟೋ ಬಂದಿದ್ದು ಚಾಸಾ-3 ರವರು ಪ್ರಾಸಾ-1 ರವರನ್ನು ಆಟೋದಲ್ಲಿ ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ನನ್ನ ಬೈಕಿನಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ವೈದ್ಯರು ಪ್ರಾಸಾ-1 ರವರಿಗೆ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಹೋಗುವಂತೆ ತಿಳಿಸಿದರು.

ದಿನಾಂಕಃ21.10.2019 ರಂದು ಪೊಲೀಸರು ಕಕ್ಕೆ ಹೊಳೆ ಬಳಿ ಬಂದಿದ್ದು ಆ ದಿನ ಆರೋಪಿ ಪ್ರಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದ ಸ್ಥಳವನ್ನು ನಾನು ತೋರಿಸಿದ ಮೇರೆಗೆ, ಅವರು ಸ್ಥಳವನ್ನು ಪರಿಶೀಲಿಸಿ ಪಂಚನಾಮೆ ಬರೆದಿರುತ್ತಾರೆ. ಈಗ ನಾನು ನೋಡುತ್ತಿರುವ ಪಂಚನಾಮೆ ಆ ದಿನ ಪೊಲೀಸರು ನನ್ನ ಸಮಕ್ಷಮ ಬರೆದ ಪಂಚನಾಮೆ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಚಾಸಾ-5 ರವರ ಅಂಗಡಿಯ ಬಳಿ ಬಂದಿದ್ದು ಕೃತ್ಯ ನಡೆದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದ ಮೇರೆಗೆ ಪೊಲೀಸರು ಅದನ್ನು ಅಜಮಾಯಿಸಿ ಪಂಚನಾಮೆ ಬರೆದಿರುತ್ತಾರೆ. ಪಂಚನಾಮೆ ಸಂದರ್ಭದಲ್ಲಿ ಪ್ರಾಸಾ-1 ರವರಿಗೆ ಸೇರಿದ ಬೈಕನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಈಗ ನಾನು ನೋಡುತ್ತಿರುವ ಪಂಚನಾಮೆ ಆ ದಿನ ಪೊಲೀಸರು ನನ್ನ ಸಮಕ್ಷಮ ಬರೆದ ಪಂಚನಾಮೆ ಇದ್ದು, ಅದನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆ ದಿನ ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ ಕೋವಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಕೋವಿ ಆ ದಿನ ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ ಕೋವಿ ಇರುತ್ತದೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಅದೇ ರೀತಿ ಈಗ ನಾನು ನೋಡುತ್ತಿರುವ ಮು.ಮಾ. 2 ರಿಂದ 4 ಬಟ್ಟೆಗಳು ಆ ದಿನ ಪ್ರಾಸಾ-1 ರವರು ಕೃತ್ಯ ನಡೆದ ಸಂದರ್ಭದಲ್ಲಿ ಧರಿಸಿದ್ದ

ಬಟ್ಟೆಗಳಿರುತ್ತವೆ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.